<u>**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**</u>
<u>**ಘನ ನ್ಯಾಯಾಲಯದಲ್ಲಿ**</u>

<u>**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್** *48/2014*</u>

**ದಿನಾಂಕಃ** ***10.08.2023***
*(ಸಾಕ್ಷಿಗೆ ಪ್ರಮಾಣ* ***ಮಾಡಿಸಲಾಯಿತು.)***

**ಪ್ರಾ.ಸಾಃ** *13* **(ಚಾ.ಸಾ.*21* )**

| | | |
|---|---|---|
| **ಹೆಸರು** | ಃ | **ಹೆಚ್. ಮಂಜಪ್ಪ** |
| **ತಂದೆಯ ಹೆಸರು** | ಃ | **ಹುಚ್ಚಪ್ಪ** |
| **ವಯಸ್ಸು** | ಃ | *72* **ವರ್ಷ** |
| **ಉದ್ಯೋಗ** | ಃ | **ನಿವೃತ್ತ ಡಿವೈಎಸ್ ಪಿ** |
| **ವಾಸ ಸ್ಥಳ** | ಃ | **ಶಿವಮೊಗ್ಗ** |

<u>**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**</u>

ಸೆಪ್ಟೆಂಬರ್ ***2007*** ರಿಂದ ಮೇ ***2011*** ರವರೆಗೆ ನಾನು ರಾಮನಗರ ಲೋಕಾಯುಕ್ತ ಕಛೇರಿಯಲ್ಲಿ ಡಿವೈಎಸ್ ಪಿ ಆಗಿ ಕೆಲಸ ನಿರ್ವಹಿಸಿದೇನೆ.

***2.*** ದಿಃ ***06.08.2010*** ರಂದು ಪ್ರಕರಣದ ಪಿರ್ಯಾದಿ ಗುರುರಾಜು ಎಂಬುವವರು ಠಾಣೆಗೆ ಹಾಜರಾಗಿ ಒಂದು ಟೇಪ್ ಮಾಡಿದ ಕಂಪ್ಲೆಂಟ್ ಮತ್ತು ಒಂದು ಟೇಪ್ ರೆಕಾರ್ಡ್ ನ್ನು ಹಾಜರು ಪಡಿಸಿದ್ದರು.

***3.*** ದಿಃ***03.08.2010*** ರಂದು ನಮ್ಮ ಕಛೇರಿಗೆ ಬಂದು ಆರೋಪಿ ಹರ್ಷ ಎಸ್.ಡಿ.ಎ. ಮತ್ತು ಮೋಹನ್ ಗ್ರಾಮ ಲೆಕ್ಕಾಧಿಕಾರಿಗಳು ಖಾತೆ ಬದಲಾವಣೆ ಮಾಡಲು ಹಣ ಕೇಳುತ್ತಿದಾರೆ ಎಂದು ತಿಳಿಸಿದರು. ಆಗ ನಾನು ಅವರಿಗೆ ವಾಯ್ಸ್ ರೆಕಾರ್ಡ್ ಕೊಟ್ಟು ಪಿರ್ಯಾದಿ ಮತ್ತು ಆರೋಪಿ ನಡುವೆ ನಡೆಯವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡು ಹಾಜರುಪಡಿಸುವಂತೆ ಹೇಳಿದೆನು.

***4.*** ದೂರನ್ನು ಪರಿಶೀಲಿಸಿದಾಗ ಸತ್ಯಾಂಶ ಕಂಡು ಬಂದಿದ್ದರಿಂದ ದೂರಿನ ಸಾರಾಂಶದ ಮೇರೆಗೆ ಠಾಣಾ ಮೊಕದ್ದಮೆ ಸಂ.***05/10*** ರಲ್ಲಿ ಪ್ರಕರಣ ದಾಖಲಿಸಿ

ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ಕಳುಹಿಸಿ ಕೊಟ್ಟಿರುತ್ತಾರೆ. ಸಾಕ್ಷಿ ಗುರುತಿಸಿದ ದೂರನ್ನು ಈಗಾಗಲೇ ನಿಪಿ *1* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *1 (*ಬಿ*)* ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಪ್ರ.ವ.ವ. ಯನ್ನು ನಿಪಿ *45* ಎಂದು, ಸಾಕ್ಷಿಯ ಸಹಿಯನ್ನು *45(*ಎ*)* ಎಂದು ಗುರುತಿಸಲಾಯಿತು. ದೂರಿನ ಜೊತೆಗೆ ಚಾಸಾ *1* ರವರು ಒಂದು ಭೂಮಿ ಅರ್ಜಿ ಸ್ವೀಕೃತಿ ಮತ್ತು ಎಂಡಾರ್ಸ್‌ಮೆಂಟ್ ನ್ನು ಹಾಜರು ಪಡಿಸಿದರು. ಅವುಗಳನ್ನು ಕ್ರಮವಾಗಿ ನಿಪಿ *46* ಮತ್ತು ನಿಪಿ *47* ಎಂದು ಗುರುತಿಸಲಾಗಿಯಿತು.

*5.* ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ತಮ್ಮ ಸಿಬ್ಬಂದಿಗಳನ್ನು ಪಂಚರಾಗಿ ಕಳುಹಿಸಿಕೊಡುವಂತೆ ಕೋರಿ, ಕೋರಿಕೆ ಪತ್ರವನ್ನು ಕಳುಹಿಸಿರುತ್ತೇನೆ. ಸಾಕ್ಷಿ ಗುರುತಿಸಿದ ಕೋರಿಕೆ ಪತ್ರಗಳನ್ನು ಕ್ರಮವಾಗಿ ನಿಪಿ *48* ಮತ್ತು *49* ಎಂದು ಸಾಕ್ಷಿಯ ಸಹಿಗಳನ್ನು ನಿಪಿ *48(*ಎ*)* ಮತ್ತು *49(*ಎ*)* ಎಂದು ಗುರುತಿಸಲಾಯಿತು.

*6.* ಉಪನೋಂದಣಾಧಿಕಾರಿಗಳ ಕಛೇರಿಯಿಂದ ಚಾಸಾ *2* ಯೋಗೇಶ ಹಾಗೂ ಶಿಕ್ಷಣಾ ಇಲಾಖೆಯ ವತಿಯಿಂದ ಚಾಸಾ *3* ಜೆ.ಹೆಚ್. ರಾಜಪ್ಪ ಇವರು ಮಧ್ಯಾಹ್ನ *11.45* ಗಂಟೆಗೆ ನಮ್ಮ ಕಚೇರಿಗೆ ಹಾಜರಾದರು. ನಾನು ಅವರಿಗೆ ಪಿರ್ಯಾದಿಗೆ ಪರಿಚಯ ಮಾಡಿಕೊಟ್ಟು, ಪಿರ್ಯಾದಿ ಅಂಶವನ್ನು ತಿಳಿಸಿರುತ್ತೇನೆ ಮತ್ತು ಪಂಚರಾಗುವಂತೆ ಕೇಳಿಕೊಂಡೆ ಮತ್ತು ಅವರು ಒಪ್ಪಿಕೊಂಡರು. ಚಾಸಾ *2* ಯೋಗೇಶ್ ಇವರನ್ನ ಪಂಚ *1* ಎಂದು, ಚಾಸಾ *3* ಜಿ.ಹೆಚ್. ರಾಜಪ್ಪ ಇವರನ್ನ ಪಂಚ *2* ಎಂದು ನೇಮಕ ಮಾಡಿದೆನು.

*7.* ಪಿರ್ಯಾದಿಯನ್ನು ಲಂಚವಾಗಿ ಕೊಡಲು ತಂದಿದ್ದ ಹಣವನ್ನು ಹಾಜರು ಪಡಿಸುವಂತೆ ಕೇಳಿದಾಗ ಅವರು *500* ರೂ. *8* ನೋಟುಗಳು *1,000* ಮುಖ ಬೆಲೆಯ *21* ನೋಟುಗಳು ಹಾಜರುಪಡಿಸಿ ಮತ್ತು ಅದರ ಜೊತೆಗೆ ಟೇಪ್ ರೆಕಾರ್ಡ್ ನ್ನು ಹಾಜರು ಪಡಿಸಿದರು.

*8.* ನಂತರ ಸದರಿ ನೋಟುಗಳನ್ನು ಪಂಚ-*2* ಜಿ.ಹೆಚ್. ರಾಜಪ್ಪ ಇವರ ಕೈಗೆ ಕೊಟ್ಟು ಎಣಿಸುವಂತೆ ಹೇಳಿದೆನು. ಅವರು ಅವುಗಳನ್ನು ಎಣಿಸಿ ಅವುಗಳ ನಂಬರ್

ನ್ನು ಪಂಚ-*1* ಯೋಗೇಶ್ ರವರಿಗೆ ಹೇಳಿದರು. ಅವರು ಸದರಿ ನೋಟುಗಳ ನಂಬರ್ ಗಳನ್ನು ಮತ್ತು ಮುಖಬೆಲೆಗಳನ್ನು ನಾನು ಸೂಚಿಸಿದಂತೆ ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡರು. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ನಿಪಿ *25* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *25 (ಸಿ)* ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಚಾಸಾ *1* ಮತ್ತು *2* ರವರು ಸಹಿ ಹಾಕಿರುತ್ತಾರೆ.

*9.* ವಾಯ್ಸ್ ರೆಕಾರ್ಡ್ ನ ಆನ್ ಮಾಡಿದಾಗ ಸಂಭಾಷಣೆ ಅಸ್ಪಷ್ಟವಾಗಿದ್ದು ಅದನ್ನು ಸೀಜ್ ಮಾಡಲಿಲ್ಲ. ನಮ್ಮ ಸಿಬ್ಬಂದಿ ಚಾಸಾ *16* ಬೋರೇಗೌಡ ಇವರಿಗೆ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಸವರುವಂತೆ ತಿಳಿಸಿದೆನು. ಅವರು ಅದರಂತೆ ಎಲ್ಲಾ ನೋಟುಗಳಿಗೆ ಸವರಿದ್ದರು. ಸದರಿ ನೋಟುಗಳನ್ನು ಎಣಿಸುವಂತೆ ಪಂಚ-*1* ರವರ ಕೈಗೆ ಕೊಟ್ಟು ಎಣಿಸುವಂತೆ ಹೇಳಿದೆ. ಅವು ನಿಪಿ *25* ರ ದಾಖಲೆಗೆ ತಾಳೆ ಮಾಡಿ ನೋಡಿ ಸರಿ ಇದೆ ಎಂದು ದೃಢೀಕರಿಸಿದ್ದರು.

*10.* ಪಂಚ-*2* ಜೆ.ಹೆಚ್. ರಾಜಪ್ಪ ಇವರಿಗೆ ಪಿರ್ಯಾದಿ ಜೇಬ್ ನ್ನು ಪರಿಶೀಲಿಸುವಂತೆ ಸೂಚಿಸಿದೆ ಅವರು ಅದರಂತೆ ಪರಿಶೀಲಿಸಿದ್ದರು. ಅವರು ಏನು ಇಲ್ಲ ಎಂದು ಹೇಳಿದರು. ಪಂಚ-*1* ರವರಿಗೆ ಸದರಿ ನೋಟುಗಳನ್ನು ಪಿರ್ಯಾದಿಯ ಶರ್ಟಿನ ಎಡಭಾಗದ ಜೇಬಿನಲ್ಲಿ ಇಡುವಂತೆ ತಿಳಿಸಿದಾಗ ಅವರು ಅದರಂತೆ ಶರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟರು.

*11.* ನಾನು ಪಿರ್ಯಾದಿಗೆ, ಆರೋಪಿ ಮೋಹನ್ ಗೆ ಫೋನ್ ಮಾಡಿ ಎಲ್ಲಿಗೆ ಬರಬೇಕು ಎಂದು ಕೇಳಿ ತಿಳಿದುಕೊಳ್ಳುವಂತೆ ಸೂಚಿಸಿದೆನು ಮತ್ತು ಆರೋಪಿಯನ್ನು ಭೇಟಿ ಮಾಡಿ ಹಣ ಕೇಳಿದರೆ ಕೊಡಬೇಕು, ಅವರಿಗೆ ಹಣ ಕೊಟ್ಟ ನಂತರ ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ಗಮನಿಸುವಂತೆ ಮತ್ತು ಆರೋಪಿ ಹಣ ಪಡೆದುಕೊಂಡ ನಂತರ ತಲೆ ಸವರಿಕೊಳ್ಳುವುದರ ಮೂಲಕ ನಮಗೆ ಸೂಚನೆ ಕೊಡುವಂತೆ ತಿಳಿಸಿದೆನು.

*12.* ನಮ್ಮ ಸಿಬ್ಬಂದಿ ಚಾಸಾ *18* ಕೃಷ್ಣಮೂರ್ತಿ ಯವರಿಗೆ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸುವಂತೆ ಹೇಳಿದೆನು. ಅದರಂತೆ ಅವರು ಒಂದು ಬಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದರು.

ಅದರಲ್ಲಿ ಸ್ವಲ್ಪ ದ್ರಾವಣವನ್ನು ಸ್ಯಾಂಪಲ್ ಗಾಗಿ ಒಂದು ಬಾಟಲಿನಲ್ಲಿ ತೆಗೆದು ಕ್ಯೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡೆವು. ಈಗ ನೋಡಿದ ಮು.ಮಾ.*2* ಅದೇ ಬಾಟಲಿ ಇರುತ್ತದೆ. ಅದರ ಮೇಲೆ ಅಂಟಿಸಿದ ಚೀಟಿಯಲ್ಲಿ ನನ್ನ ಮತ್ತು ಪಂಚರ ಸಹಿಗಳಿರುತ್ತವೆ.

*13.* ಉಳಿದ ದ್ರಾವಣದಲ್ಲಿ ಪಂಚ-*2* ಇವರ ಕೈಗಳನ್ನು ಅದ್ದಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಕ್ಯೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡೆನು. ಮು.ಮಾ.*3* ಅದೇ ಬಾಟಲಿ ಇರುತ್ತದೆ.

*14.* ನಂತರ ಪಿರ್ಯಾದಿಗೆ ಮತ್ತು ಪಂಚರಿಗೆ ಸೋಡಿಯಂ ಕಾರ್ಬೋನೇಟ್ ದ್ರಾವಣದ ರಾಸಾಯನಿಕ ಗುಣಗಳ ಬಗ್ಗೆ ತಿಳಿಸಿದೆನು. ಪಿರ್ಯಾದಿಯನ್ನು ವಿಚಾರಿಸಿದಾಗ ಆರೋಪಿ ಮೋಹನ್ ತನಗೆ ರಾಮನಗರದ ಶಾನ್ ಟಾಕೀಸ್ ಹತ್ತಿರ ಬರುವಂತೆ ತಿಳಿಸಿದ್ದಾರೆ ಎಂದು ಹೇಳಿದ.

*15.* ಪಂಚ-*1* ಇವರಿಗೆ ನೀವು ದೂರುದಾರರೊಂದಿಗೆ ಜೊತೆಯಾಗಿದ್ದು ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸಿ ತಿಳಿಸುವಂತೆ ಹೇಳಿದೆನು.

*16.* ಪಂಚ-*2* ಇವರಿಗೆ ನೀವು ನಮ್ಮ ಜೊತೆ ಇದ್ದು ಅಲ್ಲಿ ವೀಕ್ಷಣೆ ಮಾಡಬೇಕು ಎಂದು ತಿಳಿಸಿದೆ.

*17.* ಪಿರ್ಯಾದಿಗೆ ಒಂದು ಟೇಪ್ ರೆಕಾರ್ಡ್ ಕೊಟ್ಟು ಆರೋಪಿಯೊಂದಿಗೆ ಮಾತನಾಡುವ ಮೊದಲು ಟೇಪ್ ರೆಕಾರ್ಡ್ ಆನ್ ಮಾಡಿಕೊಂಡು ತನ್ನ ಮತ್ತು ಆರೋಪಿಯೊಂದಿಗಿನ ಸಂಭಾಷಣೆಯನ್ನು ರೆರ್ಕಾಡ್ ಮಾಡಿಕೊಳ್ಳುವಂತೆ ತಿಳಿಸಿದೆನು.

*18.* ನಾನು ಮತ್ತು ನಮ್ಮ ಸಿಬ್ಬಂದಿ ಮತ್ತು ಪಂಚರು ಸೋಪಿನಿಂದ ಕೈ ತೊಳೆದುಕೊಂಡೆವು. ಮಧ್ಯಾಹ್ನ *01.00* ಗಂಟೆಯಿಂದ *02.15* ಗಂಟೆವರೆಗೆ ಪ್ರಾಯೋಗಿಕ ಪಂಚನಾಮೆಯನ್ನು ನಮ್ಮ ಕಛೇರಿಯಲ್ಲಿ ಮಾಡಿದೆವು. ಸಾಕ್ಷಿ ಗುರುತಿಸಸಿದ ಪ್ರಾಯೋಗಿಕ ಪಂಚನಾಮೆಯನ್ನು ನಿಪಿ *2* ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ *2 (ಬಿ)* ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ಫೋಟೋಗಳನ್ನು ನಮ್ಮ ಸಿಬ್ಬಂದಿ ಸುರೇಶ್ ರವರ ಮೂಲಕ ತೆಗೆಸಿದೆನು. ಸಾಕ್ಷಿ ಗುರುತಿಸಿದ ಫೋಟೋಗಳನ್ನು ನಿಪಿ*4* ರಿಂದ *15* ಎಂದು

ಗುರುತಿಸಲಾಗಿದೆ. ಸದರಿ ಫೋಟೋಗಳ ನೆಗೆಟಿವ್ ಗಳನ್ನು ನಿಪಿ *4* (ಎ) ರಿಂದ *15* (ಎ) ಎಂದು ಗುರುತಿಸಲಾಗಿದೆ.

*19.* ಸಾಕ್ಷಿ ಗುರುತಿಸಿದ ಅವರ ಸಹಿಗಳನ್ನು ಕ್ರಮವಾಗಿ ನಿಪಿ *4* (ಬಿ) ರಿಂದ *15*(ಬಿ) ಎಂದು ಗುರುತಿಸಲಾಯಿತು. ಅಮಾನತ್ತು ಪಡಿಸಿಕೊಂಡ ವಸ್ತುಗಳ ಬಗ್ಗೆ ನ್ಯಾಯಾಲಯಕ್ಕೆ ಪಿ.ಎಫ್ ನಂ.*09/10* ನ್ನು ಸಲ್ಲಿಸಿರುತ್ತೇನೆ. ಸದರಿ ಪಿಎಫ್ ನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ *50* ಎಂದು, ಸಾಕ್ಷಿಯ ಸಹಿಯನ್ನು ನಿಪಿ *50* (ಎ) ಎಂದು ಗುರುತಿಸಲಾಯಿತು.

*20.* ಮಧ್ಯಾಹ್ನ *02.25* ಕ್ಕೆ ನಾನು, ಪಿರ್ಯಾದಿ, ಪಂಚರು ಮತ್ತು ಸಿಬ್ಬಂದಿ ನಮ್ಮ ಇಲಾಖಾ ಜೀಪ್ ಸಂ. ಕೆಎ *42*-ಜಿ-*1269* ಗೆ ಹೊರಟು ಶಾನ್ ಟಾಕೀಸ್ ಹತ್ತಿರ ಸುಮಾರು *600* ಅಡಿ ದೂರದಲ್ಲಿ ವಾಹನ ನಿಲ್ಲಿಸಿ ಪಿರ್ಯಾದಿ ಮತ್ತು ಪಂಚ- *1* ರವರಿಗೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಕೊಟ್ಟ ಸೂಚನೆ ಕೊಟ್ಟು ಕಳುಹಿಸಿದೆವು. ನಾನು ಮತ್ತು ಪಂಚ *2* ಮತ್ತು ಸಿಬ್ಬಂದಿಗಳು ಅಲ್ಲಲ್ಲಿ ಗುಪ್ತವಾಗಿ ಕಾಯುತ್ತಾ ನಿಂತಿದೆವು.

*21.* ಮಧ್ಯಾಹ್ನ *02.40* ಗಂಟೆಗೆ ಪಿರ್ಯಾದಿ ಟಾಕೀಸ್ ನಿಂದ ಹೊರಗಡೆ ಬಂದು ತಲೆಯನ್ನು ಕೈಯಿಂದ ವರೆಸಿಕೊಳ್ಳುವುದರ ಮೂಲಕ ನಮಗೆ ಸೂಚನೆ ಕೊಟ್ಟರು. ಆಗ ನಾನು, ಪಂಚ *2* ಮತ್ತು ಸಿಬ್ಬಂದಿಗಳು ಶಾನ್ ಟಾಕೀಸ್ ಕಾಂಪೌಂಡ್ ಒಳಗಡೆ ಹೋದೆವು. ಪಿರ್ಯಾದಿಯು ಒಬ್ಬ ಆಸಾಮಿಯನ್ನು ತೋರಿಸಿ ಇವರೇ ಮೋಹನ್ ಎಂದು ಹೇಳಿ ಅವರು ನಮ್ಮಿಂದ *25,000/-* ರೂ. ಹಣವನ್ನು ಪಡೆದು ಎಣಿಸಿ ತಾನು ತೊಟ್ಟಿದ್ದ ಜೀನ್ಸ್ ಪ್ಯಾಂಟಿನ ಎಡಭಾಗದಲ್ಲಿ ಇಟ್ಟುಕೊಂಡಿದ್ದಾರೆ ಎಂದು ತಿಳಿಸಿದರು. ಅಲ್ಲಿ ಇದ್ದ ಪಂಚ *1* ರವರನ್ನು ವಿಚಾರಿಸಿದಾಗ ಅವರು ಅದೇ ರೀತಿ ತಿಳಿಸಿದರು.

*22.* ನಾನು ಮತ್ತು ನಮ್ಮ ಸಿಬ್ಬಂದಿ ಆರೋಪಿಯನ್ನುಹಿವುಡಿದುಕೊಂಡೆವು, ನಾನು ಆರೋಪಿಗೆ ನನ್ನ, ಪಂಚ *1* ಮತ್ತು *2* ರವರ ಪಡರಿಚಯ ಮಾಡಿಕೊಟ್ಟೆನು ಮತ್ತು ನಾವು ಬಂದ ಉದ್ದೇಶವನ್ನು ಅವರಿಗೆ ತಿಳಿಸಿದೆನು.

*23.* ಸದರಿ ಆರೋಪಿಯನ್ನ ವಿಚಾರಿಸಿದಾಗ ತಮ್ಮ ಹೆಸರು ಎಂ.ಎನ್. ಮೋಹನ್ ಕುಮಾರ್ ತಾನು ಗ್ರಾಮ ಲೆಕ್ಕಾಧಿಕಾರಿಯಾಗಿದ್ದು, ರಾಮನಗರದ ಗಣಕಾ

ಶಾಖೆಯಲ್ಲಿ ಕೆಲಸ ಮಾಡುತ್ತಿದೇನೆ ಎಂದು ದಿ:*29.07.2010* ರಂದು ಮಾಗಡಿ ತಾಲ್ಲೂಕು ಕಚೇರಿಗೆ ವರ್ಗಾವಣೆಯಾಗಿದ್ದು, ತಾನು ರಾಮನಗರಕ್ಕೆ ಆಗಾಗ ಕ್ರಿಕೆಟ್ ಆಡಲು ಬರುತ್ತಿದೇನೆ ಎಂದು ತಿಳಿಸಿದ.

*24.* ನನ್ನ ಸಿಬ್ಬಂದಿ ಬೋರೇಗೌಡ ಇವರಿಗೆ *2* ಬಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತಯಾರಿಸುವಂತೆ ಹೇಳಿದಾಗ ಶಾನ್ ಟಾಕೀಸ್ ಸಿಮೆಂಟ್ ಕಟ್ಟೆಯ ಮೇಲೆ *2* ಬಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣ ಬಣ್ಣ ರಹಿತವಾಗಿತ್ತು. ಸದರಿ ದ್ರಾವಣದಿಂದ ಸ್ವಲ್ಪ ದ್ರಾವಣದಲ್ಲಿ ಒಂದು ಬಾಟಲಿಗಾಗಿ ಮಾದರಿಗಾಗಿ ತೆಗೆದುಕೊಂಡು ಕ್ಯೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡೆನು. ಸದರಿ ಬಾಟಲಿ ಈಗ ನೋಡಿದ ಮು.ಮಾ.*4* ಆಗಿರುತ್ತದೆ. ಸದರಿ ಬಾಟಲಿಯ ಮೇಲೆ ನನ್ನ ಮತ್ತು ಪಂಚರ ಸಹಿ ಇರುತ್ತದೆ.

*25.* ಆರೋಪಿಯ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ಗೆ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಕ್ಯೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡೆನು. ಸದರಿ ಬಾಟಲಿ ಈಗ ನೋಡಿದ ಮು.ಮಾ.*5* ಆಗಿರುತ್ತದೆ. ಸದರಿ ಬಾಟಲಿಯ ಮೇಲೆ ನನ್ನ ಮತ್ತು ಪಂಚರ ಸಹಿ ಇರುತ್ತದೆ.

*26.* ಆರೋಪಿಯ ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ಗೆ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಕ್ಯೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡೆನು. ಸದರಿ ಬಾಟಲಿ ಈಗ ನೋಡಿದ ಮು.ಮಾ.*6* ಆಗಿರುತ್ತದೆ. ಸದರಿ ಬಾಟಲಿಯ ಮೇಲೆ ನನ್ನ ಮತ್ತು ಪಂಚರ ಸಹಿ ಇರುತ್ತದೆ.

*27.* ಆರೋಪಿಯನ್ನು ಕೇಳಿದಾಗ ಆರೋಪಿ ತನ್ನ ಪ್ಯಾಂಟಿನ ಹಿಂಭಾಗದ ಎಡಭಾಗದಲ್ಲಿ ಇಟ್ಟುಕೊಂಡಿದ್ದ ಹಣವನ್ನು ಹಾಜರುಪಡಿಸಿದ. ಅದನ್ನು ಪಂಚ *1* ರವರಿಗೆ ಕೊಟ್ಟು ಅವುಗಳ ನಂಬರ್ ಮತ್ತು ಮೌಲ್ಯಗಳನ್ನು ನಿಪಿ *25* ರೊಂದಿಗೆ ತಾಳೆ ಮಾಡಿ ನೋಡಲು ತಿಳಿಸಿದೇನು ಆ ಪ್ರಕಾರ ಪಂಚ *1* ಅವುಗಳನ್ನು ಪರೀಕ್ಷಿಸಿ ಪ್ರಾಯೋಗಿಕ ಪಂಚನಾಮೆ ಗೆ ಕೊಟ್ಟ ನೋಟುಗಳು ಅವೇ ಎಂದು ತಿಳಿಸಿದನು. ಸದರಿ *500* ಮುಖ ಬೆಲೆಯ *8* ನೋಟುಗಳು ಮತ್ತು *1000*

ಮುಖಬೆಲೆಯ *20* ನೋಟುಗಳನ್ನು ಖಾಲೆ ಕವರಿಗೆ ಹಾಕಿ ಬಾಯಿ ಅಂಟಿ ಕ್ಯೂ ಅಕ್ಷರಿದಿಂದ ಸೀಲ್ ಮಾಡಿ ವಶಪಡಿಸಿಕೊಂಡೆನು. ಸದರಿ ನೋಟುಗಳನ್ನು ಈಗಾಗಲೇ ಮು.ಮಾ. *1* ಎಂದು ಗುರುತಿಸಲಾಗಿದೆ.

*28.* ಆರೋಪಿಗೆ ಬದಲಿ ಪ್ಯಾಂಟ್ ಗೆ ವ್ಯವಸ್ಥೆ ಮಾಡಿ ಆತನು ದಧರಿಸಿದ ಪ್ಯಾಂಟ್ ನ್ನು ತೆಗೆದುಕೊಂಡು ಒಂದು ಬಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ನಮ್ಮ ಸಿಬ್ಬಂದಿ ಬೋರೇಗೌಡ ರವರಿಂದ ತಯಾರಿಸಿದೆನು. ಆರೋಪಿಯ ಪ್ಯಾಂಟಿನ ಹಿಂಭಾಗದ ಎಡಭಾಗದ ಜೇಬಿನ ಸದರಿ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಕ್ಯೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡೆನು. ಸದರಿ ಬಾಟಲಿ ಈಗ ನೋಡಿದ ಮು.ಮಾ.*7* ಆಗಿರುತ್ತದೆ. ಸದರಿ ಬಾಟಲಿಯ ಮೇಲೆ ನನ್ನ ಮತ್ತು ಪಂಚರ ಸಹಿ ಇರುತ್ತದೆ.

*29.* ಪ್ಯಾಂಟ್ ನ್ನು ಒಂದು ಪೇಪರ್ ನಲ್ಲಿ ಸುತ್ತಿ ದಾರದಿಂದ ಕಟ್ಟಿ ಪೇಪರ್ ಕವರಿನಲ್ಲಿ ಹಾಕಿ ಕ್ಯೂ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡೆನು. ಸಾಕ್ಷಿ ಗುರುತಿಸಿದ ಪ್ಯಾಂಟ್ ನ್ನು ಈಗಾಗಲೇ ಮು. ಮಾ. *8* ಎಂದು ಗುರುತಿಸಲಾಗಿದೆ.

*30.* ಕ್ಯೂ ಎಂಬ ಅಕ್ಷರದ ಸೀಲ್ ನ್ನು ಪಂಚ *1* ರವರಿಗೆ ಕೊಟ್ಟು ಸದರಿ ಸೀಲ್‌ನ್ನು ನ್ಯಾಯಾಲಯ ಆಗಲೀ ತನಿಖಾಧಿಕಾರಿಯಗಲೀ ಕೇಳಿದಾಗ ಹಾಜರು ಪಡಿಸಬೇಕು ಎಂದು ತಿಳಿಸಿದೆನು. ಆ ಕಾಲಕ್ಕೆ ಒಂದು ಬಿಳಿ ಹಾಳೆಯ ಮೇಲೆ ಮಾದರಿ ಸೀಲನ್ನು ಪಡೆದುಕೊಂಡೆನು. ಸದರಿ ಮಾದರಿ ಮುದ್ರೆ ಮತ್ತು ಸೀಲನ್ನು ಒಳಗೊಂಡ ಪತ್ರವನ್ನು ನಿಪಿ *31* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *31 (ಸಿ)* ಎಂದು ಗುರುತಿಸಲಾಯಿತು. ಪಂಚರ ಸಹಿಗಳನ್ನು ಪಡೆದಿರುತ್ತೇನೆ.

*31.* ಸಾಕ್ಷಿ ಗುರುತಿಸಿದ ಪಂಚ*1* ರವರ ಸ್ವೀಕೃತಿ ಪತ್ರವನ್ನು ನಿಪಿ *26* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *26(ಬಿ)* ಎಂದು ಗುರುತಿಸಲಾಯಿತು.

*32.* ಆರೋಪಿಯನ್ನು ವಿಚಾರಿಸಿ ಆತನು ಕೊಟ್ಟ ಸಮಜಾಯಿಷಿ ಪತ್ರವನ್ನು ಬರೆದುಕೊಟ್ಟನು. ಆರೋಪಿ ಮೋಹನ್ ಕುಮಾರ್ ಕೊಟ್ಟ ಸಮಾಜಯಿಷಿ ಪತ್ರವನ್ನು ನಿಪಿ *28* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *28*

*(ಸಿ)* ಎಂದು ಗುರುತಿಸಲಾಯಿತು. ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಆರೋಪಿಯ ಸಹಿಯನ್ನು ನಿಪಿ *28(ಡಿ)* ಎಂದು ಗುರುತಿಸಲಾಯಿತ.

*33.* ಸದರಿ ಸಮಜಾಯಿಷಿ ಹೇಳಿಕೆಯಲ್ಲಿ ತಾನು ಈ ದಿನ ರಾಮನಗರ ಶಾನ್ ಟಾಕೀಸ್ ಮ್ಯಾಟ್ನಿ ಶೋ ನೋಡಲು ಹೋಗಿದ್ದರಿಂದ ನನ್ನ ಸ್ನೇಹಿತ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುವ ಎಸ್ ಡಿ ಎ ಹರ್ಷ ಫೋನ್ ಮಾಡಿ ಗುರುರಾಜು ರವರು ರೂ.*25,000* ಕೊಡುತ್ತಾರೆ ಅದನ್ನು ತೆಗೆದು ನಿನ್ನ ಹತ್ತಿರ ಇಟ್ಟುಕೋ ಎಂದು ಹೇಳಿ ಗುರುರಾಜು ಇವರಿಗೆ ನನ್ನ ನಂಬರ್ ಕೊಟ್ಟಿದ್ದರು, ಗುರುರಾಜು ಮಧ್ಯಾಹ್ನ *02.00* ಗಂಟೆಗೆ ನನಗೆ ಫೋನ್ ಮಾಡಿದರು, ನಾನು ಹರ್ಷ ಹೇಳಿದ ಮೇರೆಗೆ ಶಾನ್ ಟಾಕೀಸ್ ಕಾಂಪೌಂಡ್ ನಲ್ಲಿ *25,000/-* ರೂ.ಗಳನ್ನು ತೆಗೆದುಕೊಂಡು ನನ್ನ ಪ್ಯಾಂಟಿನ ಜೇಬಿನಲ್ಲಿ ಇಟ್ಟುಕೊಳ್ಳುವ ಸಂದರ್ದಲ್ಲಿ ಲೋಕಾಯುಕ್ತ ಪೊಲೀಸರು ನನ್ನನ್ನು ಹಿಡಿದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಈ ಬಗ್ಗೆ ಪಿರ್ಯಾದಿಯನ್ನು ವಿಚಾರ ಮಾಡಿದಾಗ ಆ ವಿಷಯ ಸತ್ಯ ಇದೆ ಎಂದು ಹೇಳಿದರು. ಸದರಿ ಸಮಜಾಯಿಷಿ ಪತ್ರವನ್ನು ನನ್ನ ವಶಕ್ಕೆ ಪಡೆದುಕೊಂಡೆನು.

*34.* ಸದರಿ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿದೆನು. ಸಾಕ್ಷಿ ಗುರುತಿಸಿದ ನಕಾಶೆಯನ್ನು ನಿಪಿ *27* ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ *27 (ಸಿ)* ಎಂದು ಗುರುತಿಸಲಾಯಿತು. ಸದರಿ ಕಾಲಕ್ಕೆ ನಮ್ಮ ಸಿಬ್ಬಂದಿ ಸುರೇಶ ಮುಖಾಂತರ ಫೋಟೋ ತೆಗೆಸಿದೆನು. ಸಾಕ್ಷಿ ಗುರುತಿಸಿದ ಫೋಟೋಗಳನ್ನು ನಿಪಿ *16* ರಿಂದ *20* ಎಂದು ಗುರುತಿಸಿದ್ದು, ಅವುಗಳ ನೆಗೆಟಿವ್ ಗಳನ್ನು ನಿಪಿ *16 (ಎ)* ರಿಂದ *20 (ಎ)* ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಗಳನ್ನು ನಿಪಿ *16(ಬಿ)* ರಿಂದ *20(ಬಿ)* ಎಂದು ಗುರುತಿಸಲಾಯಿತು. ಸದರಿ ಫೋಟೋಗೆ ಪಂಚರ ಸಹಿಗಳಿರುತ್ತವೆ. ಮಧ್ಯಾಹ್ನ *02.45* ರಿಂದ *05.00* ಗಂಟೆವರೆಗೆ ಪಂಚರ ಸಮಕ್ಷಮ ಮಹಜರ್ ನ್ನು ಮಾಡಿದೆನು. ಮಹಜರ್ ನ್ನು ಈಗಾಗಲೇ ನಿಪಿ *3* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *3(ಡಿ)* ಎಂದು ಗುರುತಿಸಲಾಯಿತು.

*35.* ಪಂಚನಾಮೆಗೆ ಪಿರ್ಯಾದಿ, ಆರೋಪಿ ಮತ್ತು ಪಂಚರ ಸಹಿ ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಆರೋಪಿಯ ಸಹಿಯನ್ನು ನಿಪಿ *3 (ಇ)* ಎಂದು ಗುರುತಿಸಲಾಯಿತು. ಆರೋಪಿಯನ್ನು ನಮ್ಮ ಕಚೇರಿಗೆ ಕರೆದುಕೊಂಡು ಹೋಗಿ

ದಸ್ತಗಿರಿ ಮಾಡಿ ಆ ಬಗ್ಗೆ ಆರೋಪಿಯ ಆಫೀಸ್ ನ ಸಿಬ್ಬಂದಿಯಾದ ಶಿವರುದ್ರಯ್ಯ ರವರಿಗೆ ನೋಟಿಸ್ ಕೊಟ್ಟಿರುತ್ತೇನೆ. ಸದರಿ ತಿಳುವಳಿಕೆ ನೋಟಿಸ್ ನ್ನು ನಿಪಿ *34* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *34 (ಎ)* ಎಂದು ಗುರುತಿಸಲಾಯಿತು.

*36.* ದಿಃ *07.08.2010* ರಂದು ಆರೋಪಿಯನ್ನ ನ್ಯಾಯಾಂಗ ಬಂಧನಕ್ಕಾಗಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆನು. ಅಮಾನತ್ತು ಪಡಿಸಿಕೊಂಡ ವಸ್ತುಗಳ ಬಗ್ಗೆ ನ್ಯಾಯಾಲಯಕ್ಕೆ ಪಿ.ಎಫ್. ನಂ.*10/2010* ಸಲ್ಲಿಸಿದೆನೆ. ಪಿ.ಎಫ್. ನ್ನು ನಿಪಿ *51* ಎಂದು, ಸಾಕ್ಷಿಯ ಸಹಿಯನ್ನು ನಿಪಿ *51(ಎ)* ಎಂದು ಗುರುತಿಸಲಾಯಿತು.

*37.* ದಿಃ *06.08.2010* ರಂದು ಚಾಸಾ *6* ಮತ್ತು *7* ರವರ, ದಿಃ*07.08.2010* ರಂದು ಪಿರ್ಯಾದಿ ಚಾಸಾ *1*-ಗುರುರಾಜು, ಚಾಸಾ *2* ಯೋಗೇಶ್, ಚಾಸಾ *3* ರಾಜಪ್ಪ, ಚಾಸಾ *15* ಪ್ರಭು ರಾಜ ಅರಸ್ ಚಾಸಾ *16* ಬೋರೇಗೌಡ, ಚಾಸಾ *17* ಸುರೇಶ್, ಚಾಸಾ *18* ಕೃಷ್ಣಮೂರ್ತಿ, ಚಾಸಾ *19* ತಿಪ್ಪರೇಗೌಡ, ಚಾಸಾ *20* ಶಶಿಕಲಾ ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

*38.* ದಿಃ*11.08.2010* ರಂದು ತಹಸೀಲ್ದಾರ್ ರಾಮನಗರ ರವರಿಗೆ ಆರೋಪಿಯ ಸೇವಾ ವಿವರಗಳನ್ನು ಕಳುಹಿಸುವಂತೆ ಕೋರಿ ಕೋರಿಕೆ ಪತ್ರ ಕಳುಹಿಸಿದೇನೆ. ತಹಸೀಲ್ದಾರ್ ರವರು ಆರೋಪಿ ಮೋಹನ್ ಕುಮಾರ ಇವರ ಸೇವಾ ವಿವರಗಳನ್ನು ದಿಃ*25.08.2010* ರಂದು ಮತ್ತು ಹರ್ಷ ಇವರ ಸೇವಾ ವಿವರಗಳನ್ನು ದಿಃ*17.08.2010* ರಂದು ಕಳುಹಿಸಿಕೊಟ್ಟಿರುತ್ತಾರೆ. ಮೋಹನ್ ಕುಮಾರ ಇವರ ಸೇವಾ ವಿವರ ಹೊಂದಿದ ದಾಖಲೆಯನ್ನು ನಿಪಿ *44* ಎಂದು ಮತ್ತು ಹರ್ಷ ಇವರ ಸೇವಾ ವಿವರ ಹೊಂದಿದ ದಾಖಲೆಯನ್ನು ನಿಪಿ *43* ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಅವರ ಸಹಿಯನ್ನು ನಿಪಿ *43 (ಬಿ)* ಮತ್ತು *44(ಬಿ)* ಎಂದು ಗುರುತಿಸಲಾಯಿತು.

*39.* ದಿಃ *12.08.2010* ರಂದು ಅಮಾನತ್ತು ಪಡಿಸಿಕೊಂಡ ಸ್ಯಾಂಪಲ್ ಬಾಟಲ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್ ಎಸ್ ಎಲ್ ಬೆಂಗಳೂರು ಇವರಿಗೆ ಕಳುಹಿಸಿಕೊಟ್ಟಿರುತ್ತೇನೆ.

*40.* ದಿಃ *19.08.2010* ರಂದು ಪಿರ್ಯಾದಿ, ಚಾಸಾ *2* ಮತ್ತು *3* ಇವರ ಮರು ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

*41.* ದಿಃ *28.08.2010* ರಂದು ಚಾಸಾ *16* ಬೋರೇಗೌಡ ರವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ.

*42.* ಪಿಡಬ್ಲ್ಯೂ *1* ಗುರುರಾಜು ರವರು ನಿಪಿ *21* ರಿಂದ *24* ರಂತೆ ಹೇಳಿಕೆ ಮತ್ತು ಮರುಹೇಳಿಕೆ ಕೊಟ್ಟಿರುತ್ತಾರೆ.

*43.* ಪ್ರಾ.ಸಾ. *9* ಹರಿಪ್ರಸಾದ್ ನನ್ನ ಮುಂದೆ ನಿಪಿ *40* ರಂತೆ ಹೇಳಿಕೆ ಕೊಟ್ಟಿರುತ್ತಾರೆ.

*44.* ದಿಃ*03.09.2010* ರಂದು *1* ನೇ ಆರೋಪಿ ಹರ್ಷ ನಿರೀಕ್ಷಣಾ ಜಾಮೀನಿನೊಂದಿಗೆ ನನ್ನ ಮುಂದೆನ ಹಾಜರಾದರು. ಚಾಸಾ *2* ಮತ್ತು *3* ಇವರನ್ನ ಕರೆಯಿಸಿದೆನು ಮತ್ತು ಅವರ ಸಮಕ್ಷಮ ಆರೋಪಿ ಹರ್ಷ ಈತನ ಸಮಜಾಯಿಷಿ ಹೇಳಿಕೆಯನ್ನು ಪಡೆದುಕೊಂಡೆನು. ಸಾಕ್ಷಿ ಗುರುತಿಸಿದ ಸಮಜಾಯಿಷಿ ಹೇಳಿಕೆಯನ್ನು ಈಗಾಗಲೇ ನಿಪಿ *29* ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಆರೋಪಿ ಹರ್ಷ ಈತನ ಸಹಿಯನ್ನು ನಿಪಿ *29(ಸಿ)* ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯ ಸಹಿಯನ್ನು ನಿಪಿ *29 (ಡಿ)* ಎಂದು ಗುರುತಿಸಲಾಯಿತು.

*45.* ಸದರಿ ಆರೋಪಿ ಹರ್ಷ ಇವರ ಸಮಜಾಯಿಷಿ ಹೇಳಿಕೆಯನ್ನ ಚಾಸಾ *2* ಮತ್ತು *3* ರವರ ಸಮಕ್ಷಮ ಬೆಳಿಗ್ಗೆ *10.45* ರಿಂದ *11.45* ಗಂಟೆವರೆಗೆ ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡಿದೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ *33* ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ *33 (ಬಿ)* ಎಂದು ಗುರುತಿಸಲಾಯಿತು.

*46.* ಪ್ರಕರಣದ ಮುಂದಿನ ತನಿಖೆಯನ್ನು ಪೊಲೀಸ್ ಇನ್ಸ್ಪೆಕ್ಟರ್ ಗೌತಮ್ ಇವರಿಗೆ ವಹಿಸಿಕೊಟ್ಟಿರುತ್ತೇನೆ.

*47.* ಇಂದು ನ್ಯಾಯಾಲಯದ ಮುಂದೆ ಆರೋಪಿ *2*-ಮೋಹನ್ ಕುಮಾರ್ ಇರುತ್ತಾರೆ. *1* ನೇ ಆರೋಪಿ ಹರ್ಷ ಗೈರು ಹಾಜರಿದ್ದು ಸದರಿ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಆಕ್ಷೇಪ ಇಲ್ಲ ಎಂದು ಹೇಳಿರುತ್ತಾರೆ.

**ಆರೋಪಿ *1* ಮತ್ತು *2* ರವರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು:**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

*(ನಿಂಗಪ್ಪ ಪರಶುರಾಮ ಕೋಪರ್ಡೆ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ: *14.09.2023***
***(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)***

**ಪಾಟೀ ಸವಾಲು: ಆರೋಪಿ *1* ರವರ ಪರ ಶ್ರೀ.ಆರ್.ಎನ್. ವಕೀಲರಿಂದ:**

*48.* ದಿ:*03.08.2010* ರಂದು ಚಾಸಾ *1* ರವರು ನಮ್ಮ ಠಾಣೆಗೆ ಬಂದು ಯಾವುದೇ ಲಿಖಿತ ದೂರು ಕೊಟ್ಟಿಲ್ಲ ಎಂದರೆ ಸರಿ. ಆರೋಪಿ *1* ಇವರ ಹತ್ತಿರ ತಮ್ಮ ಕೆಲಸ ಬಾಕಿ ಇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಅವರ ಮೌಖಿಕ ಹೇಳಿಕೆಯ ಆಧಾರದ ಮೇಲೆ ದಿ:*03.08.2010* ರಂದು ನಾನು ಯಾವುದೇ ಕೇಸು ದಾಖಲಿಸಿಲ್ಲ ಎಂದರೆ ಸರಿ.

*49.* ದಿ:*03.08.2010* ರಂದು ಚಾಸಾ *1* ರವರಿಗೆ ಮೈಕೋ ಟೇಪ್ ರೆಕಾರ್ಡ್ ನಮ್ಮ ದಾಖಲೆಯಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿ. *1*ನೇ ಆರೋಪಿಯು ಪಿರ್ಯಾದುದಾರರಿಂದ ಹಣ ಕೇಳಿ ಮೊಬೈಲ್ ಕರೆ ಮಾಡಿಲ್ಲ ಎಂದರೆ ಸರಿ. ಸದರಿ ಟೇಪ್ ರೆಕಾರ್ಡ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ.

*50.* ಟೇಪ್ ರೆಕಾರ್ಡ್ ನಲ್ಲಿ ಏನು ಸಂಭಾಷಣೆ ದಾಖಲಾಗಿತ್ತು ಎಂಬ ಬಗ್ಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಏಕೆಂದರೆ ಸಂಭಾಷಣೆ ಅಸ್ಪಷ್ಟವಾಗಿದ್ದರಿಂದ ತೋರಿಸಿಲ್ಲ. ಸದರಿ ಟೇಪ್ ರೆಕಾರ್ಡ್ ನಲ್ಲಿ ಹಣಕ್ಕಾಗಿ ಯಾವುದೇ ಬೇಡಿಕೆ ಇಟ್ಟ ಬಗ್ಗೆ ಸಂಭಾಷಣೆ ಇರಲಿಲ್ಲ ಹಾಗಾಗಿ ಸದರಿ ಟೇಪ್

ರೆಕಾರ್ಡ್ ನ್ನು ಉದ್ದೇಶ ಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಹಾಜರುಪಡಿಸಿದರೆ ಕೇಸ್ ದಾಖಲು ಮಾಡಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ.

51. ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ದೂರುದಾರರು 1ನೇ ಆರೋಪಿ ಹರ್ಷ ಎಲ್ಲಿ ಇದ್ದಾರೆ ಎಂಬ ಬಗ್ಗೆ ಕರೆ ಮಾಡಿ ಖಚಿತ ಪಡಿಸಿಕೊಂಡಿಲ್ಲ ಎಂದರೆ ಸರಿ. ಟ್ರ್ಯಾಪ್ ಮಾಡುವಾಗ 1ನೇ ಆರೋಪಿ ಹರ್ಷ ಅವರ ಆಫೀಸಿನಲ್ಲಿ ಇರಲಿಲ್ಲ ಎಂದರೆ ಆ ಬಗ್ಗೆ ನಾನು ವೇರಿಫೈ ಮಾಡಿಲ್ಲ.

52. ಪಿರ್ಯಾದಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಆರೋಪಿಯೊಂದಿಗೆ ವಶಪಡಿಸಿಕೊಂಡಿಲ್ಲ, ಆದರೆ ತಾಲ್ಲೂಕು ಕಛೇರಿಯಿಂದ ತೆಗೆದುಕೊಂಡಿದೇನೆ.

53. ಟ್ರ್ಯಾಪ್ ಆದ ಮೇಲೆ 2ನೇ ಆರೋಪಿ ಮೋಹನ್ ಕಡೆಯಿಂದ ಒಂದು ಸಮಜಾಯಿಷಿ ಪತ್ರವನ್ನು ಪಡೆದುಕೊಂಡಿದೇವೆ ಎಂದರೆ ಸರಿ. ಸದರಿ ಸಮಜಾಯಿಷಿ ಪತ್ರವನ್ನು ಆರೋಪಿ ಮೋಹನ್ ಈತನಿಂದ ನಮ್ಮ ಕಛೇರಿಯಲ್ಲಿ ಪಡೆದುಕೊಂಡಿದೇನೆ ಎಂದರೆ ಸರಿಯಲ್ಲ.

54. 2ನೇ ಆರೋಪಿ ತನ್ನ ಸಮಜಾಯಿಷಿಯನ್ನು ನಮ್ಮ ಕಛೇರಿಯಲ್ಲಿ ಬರೆದುಕೊಟ್ಟ ಎಂದರೆ ಸರಿಯಲ್ಲ. ನಿಪಿ 28 ಸಮಜಾಯಿಷಿ ಯನ್ನು 2ನೇ ಆರೋಪಿ ಕಡೆಯಿಂದ ಬಲವಂತವಾಗಿ ನಾನು ಬರೆಯಿಸಿಕೊಂಡಿದೇನೆ ಎಂದರೆ ಸರಿಯಲ್ಲ.

55. 1ನೇ ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯಧಾರ ಇರದೇ ಇದ್ದುದರಿಂದ ನಿಪಿ 28 ಸಮಜಾಯಿಷಿಯನ್ನು 1ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸುವ ಸಲುವಾಗಿ 2ನೇ ಆರೋಪಿ ಕಡೆಯಿಂದ ಬರೆಯಿಸಿಕೊಂಡಿದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ 2 ರವರ ಪರ ಶ್ರೀ.ಎಂ.ಎಂ. ವಕೀಲರಿಂದಃ**

56. ಚಾಸಾ 1 ತನ್ನ ಪಿರ್ಯಾದಿಯಲ್ಲಿ ಖಾತೆ ಬದಲಾವಣೆಗಾಗಿ ತಾನು ತನ್ನ್ ತಂದೆ ಇಬ್ಬರು ಸೇರಿ ದಿಃ16.09.2009 ರಂದು ತಾಲ್ಲೂಕು ಕಛೇರಿಗೆ ಅರ್ಜಿ ಕೊಟ್ಟಿರುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿ. ನಾನು ಹಲವು ಬಾರಿ

ಭೇಟಿಯಾದಾಗ ಅವರು ನಮ್ಮ ಫೈಲ್ ತರಿಸಿ ನೋಡಿ ಪರಿಶೀಲಿಸುತ್ತೇನೆ ಎಂದು ದಬಾಯಿಸಿ ಕಳುಹಿಸಿದರು ಎಂದು ಆಪಾದನೆ ಮಾಡಿದಾರೆ ಎಂದರೆ ಸರಿ.

57. 2ನೇ ಆರೋಪಿಯ ವಿರುದ್ಧ ಲಿಖಿತ ದೂರು ಬಂದಾಗ ಆತ ನಾಡ ಕಛೇರಿ ಮಾಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಖಾತೆ ಬದಲಾವಣೆ ಕೆಲಸವನ್ನು ಈ ಕೇಸ್ ಆದ ಸಂದರ್ಭದಲ್ಲಿ ಯಾರು ಮಾಡುತ್ತಿದ್ದರು ಎಂದು ಮಾಹಿತಿ ಇಲ್ಲ.

58. 1ನೇ ಆರೋಪಿ ಹರ್ಷ ಈ ಕಂಪ್ಲೆಂಟ್ ಆದಾಗ ಗ್ರಾಮ ಲೆಕ್ಕಾಧಿಕಾರಿಯಾಗಿ ರಾಮನಗರ ತಾಲ್ಲೂಕು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಆ ಅವಧಿಯಲ್ಲಿ 1ನೇ ಆರೋಪಿ ಹರ್ಷ ಪ್ರವಾಸ ಕಾರ್ಯಕ್ರಮ ದಿನಚರಿ ರಾಜಸ್ವ ನಿರೀಕ್ಷಕರು ಮತ್ತು ಉಪತಹಸೀಲ್ದಾರ್ ದಿನಚರಿ ಪರಿಶೀಲನೆ, ಅರೆ ಸರ್ಕಾರಿ ಪತ್ರಗಳು,ಬಿಡದಿ ಎ.ಎಲ್.ಎನ್, ದಪ್ತರ್ ಗ್ರಾಮಲೆಕ್ಕಾಧಿಕಾರಿ ಮತುತ ರಾಜಸ್ವ ನಿರೀಕ್ಷಕರ ಶಾಖೆಗಳಲ್ಲಿ ಪರಿಶೀಲನೆ ಕಛೇರಿಯಲ್ಲಿ (ನಿಪಿ 41 ರ ಪ್ರಕಾರ) ಕೆಲಸ ಮಾಡುತ್ತಿದರು ಎಂದರೆ ಸರಿ.

59. ಸದರಿ ಸಮಯದಲ್ಲಿ ಪಿರ್ಯಾದುದಾರರಿಗೆ ಸಂಬಂಧಪಟ್ಟ ಖಾತೆ ಬದಲಾವಣೆ ಕೆಲಸವನ್ನು ಆ ಶಾಖೆಯಲ್ಲಿ ಯಾರು ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ತನಿಖೆ ಮಾಡಿದ್ದೀರಾ ಎಂದರೆ ಇಲ್ಲ. ಪಿರ್ಯಾದಿಯ ಅರ್ಜಿಗೆ ಸಂಬಂಧಪಟ್ಟಂತೆ ಆ ಸಮಯದಲ್ಲಿ ಅರ್ಜಿಯನ್ನು ಸ್ವೀಕರಿಸುವ ವ್ಯಕ್ತಿ ಯಾರು ಇದ್ದರೂ, ಸಂಬಂಧಪಟ್ಟ ಗ್ರಾಮಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರು ಯಾರು ಇದ್ದರೂ ಎಂಬ ಬಗ್ಗೆ ತನಿಖೆ ಮಾಡಿದ್ದೀರಾ ಎಂದರೆ ಇಲ್ಲ.

60. ದೂರು ಪಡೆದುಕೊಂಡ ನಂತರ ಪಿರ್ಯಾದಿಯ ಕೆಲಸ ಯಾವ ವ್ಯಕ್ತಿ ಮುಂದೆ ಇದೆ ಎಂಬ ಬಗ್ಗೆ ಪ್ರಾಥಮಿಕ ತನಿಖೆ ಮಾಡಿದ್ದೀರಾ ಎಂದರೆ ಇಲ್ಲ. ದೂರು ಕೊಟ್ಟ ಸಮಯದಲ್ಲಿ ಪಿರ್ಯಾದುದಾರರಿಗೆ ಸಂಬಂಧಪಟ್ಟ ಕೆಲಸ ಆರೋಪಿ 1 ಮತ್ತು 2 ರವರ ಮುಂದೆ ಇರಲಿಲ್ಲ ಎಂದರೆ ಸರಿ.

61. ನಾನು ತಹಸೀಲ್ದಾರ್ ರವರನ್ನು ಭೇಟಿ ಮಾಡಿ ಖಾತೆಯ ಬದಲಾವಣೆಗೆ ಸಂಬಂದಪಟ್ಟಂತೆ ಯಾರ್ಯಾರು ಮುಂದೆ ಸದರಿ ಅರ್ಜಿ ಪೆಂಡಿಂಗ್ ಇದೆ ಎಂದು ವಿಚಾರಣೆ ಮಾಡಿಲ್ಲ.

62. ಗ್ರಾಮಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರನ್ನು ಭೇಟಿ ಮಾಡಿ ಖಾತೆ ಬದಲಾವಣೆ ಮಾಡುವ ಅಧಿಕಾರ ಯಾರಿಗೆ ಸೇರಿದ್ದು ಎಂಬ ಬಗ್ಗೆ ಮಾಡಿದ್ದೀರಾ ಎಂದರೆ ಇಲ್ಲ.

63. ದಿಃ29.07.2010 ರಿಂದ 2ನೇ ಆರೋಪಿ ಮೋಹನ್ ಮಾಗಡಿಯ ತಾಲ್ಲೂಕು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. 2ನೇ ಆರೋಪಿ ಎಲ್ಲಿ ವಾಸವಾಗಿದ್ದಾನೆ ಎಂಬ ಬಗ್ಗೆ ತನಿಖೆ ಮಾಡಿದ್ದೀರಾ ಎಂದರೆ ಇಲ್ಲ.

64. ಎಫ್.ಐ.ಆರ್. ನಲ್ಲಿ 1ನೇ ಆರೋಪಿ ಮಾಗಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂಬ ಬಗ್ಗೆ ವಿಳಾಸ ತೋರಿಸಿಲ್ಲ ಎಂದರೆ ಸರಿ. 1ನೇ ಆರೋಪಿಯ ವಾಸ ಸ್ಥಳ ವಿಳಾಸವನ್ನು ಕಂಡುಕೊಳ್ಳಲು ಪ್ರಯತ್ನ ಮಾಡಿದ್ದೀರಾ ಎಂದರೆ ಇಲ್ಲ.

65. ದೂರಿನಲ್ಲಿ ಆರೋಪಿ ಮೋಹನ್ ಕುಮಾರ್ ದೂರುದಾರನನ್ನು ದಿಃ03.08.2010 ರಂದು ಖುದ್ದಾಗಿ ಎಲ್ಲಿ ಭೇಟಿ ಆದರೂ ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ.

66. ಸದರಿ ಆರೋಪಿ ಪಿರ್ಯಾದಿಗಳೊಂದಿಗೆ ಮೊಬೈಲ್ ನಲ್ಲಿ ಮಾತನಾಡಿದ ಬಗ್ಗೆ ಸಿಡಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಇಲ್ಲ. ಆ ದಿವಸ ಶಾನ್ ತೇಟರ್ ನಲ್ಲಿ ಯಾವ ಸಿನಿಮಾ ಇತ್ತು ಎಂದು ಗೊತ್ತಿಲ್ಲ. ನಾವು ಅಲ್ಲಿ ಹೋದಾಗ ಸಮಯ ಮಧ್ಯಾಹ್ನ 02.30 ಗಂಟೆ ಇತ್ತು. ಸದರಿ ಸಿನಿಮಾ ಮಧ್ಯಾಹ್ನ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಶೋ ಇತ್ತು ಎಂದು ನಿರ್ಧಿಷ್ಟವಾಗಿ ಗೊತ್ತಿಲ್ಲ. 2 ವರೆ ಯಿಂದ ಇರಬಹುದು.

67. ಬೆಂಗಳೂರು ಕಡೆ ಹೋಗುವ ರಸ್ತೆಯಲ್ಲಿ ಪೂರ್ವದ ಕಡೆ ಗೇಟ್ ಇದೆ ಸ್ವಲ್ಪ ಮುಂದೆ ಹೋದರೆ ಒಂದು ಕಕೂನ್ ಗ್ರೇನೇಜ್, ಒಂದು ಪೋಸ್ಟ್ ಆಫೀಸ್ ಮತ್ತು ಇಎಸ್ ಐ ಹಾಸ್ಪಿಟಲ್ ಇದೆ ಎಂದರೆ ನಾನು ಗಮನಿಸಿಲ್ಲ. ಸದರಿ ಪೂರ್ವದ ಕಾಂಪೌಂಡ್ ಎಷ್ಟು ಅಡಿ ಎತ್ತರ ಇದೆ ಎಂದು ಅಳತೆ ಮಾಡಿಲ್ಲ. ನೀವು ಪೋಸ್ಟ್ ಆಫೀಸ್ ಹತ್ತಿರ ಅಥವಾ ಗ್ರೇನೆಜ್ ಹತ್ತಿರ ಅಥವಾ ಇಎಸ್ಐ ಹಾಸ್ಪಿಟಲ್ ನಾವು ಗಾಡಿ ನಿಲ್ಲಿಸಿದ್ದ ಹತ್ತಿರ ನಿಂತಿದೆವು.

68. ನಾವು ನಿಂತಿದ್ದ ಸ್ಥಳದಲ್ಲಿ ಗೇಟ್ ಒಳಗೆ ಯಾರು ಇದ್ದಾರೆ, ಯಾರು ಹೋಗುತ್ತಿದ್ದಾರೆ, ಯಾರು ಬರುತ್ತಿದ್ದಾರೆ, ಏನು ನಡೆಯುತ್ತಿದೆ ಎಂದು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

69. ಪಿರ್ಯಾದಿ ಮೊಬೈಲ್ ನಿಂದ ಮಾತನಾಡಿ ಆರೋಪಿ ಮೋಹನ್ ನನ್ನು ಹೊರಗೆ ಕರೆಸಿದರು. ಅ ಸಮಯದಲ್ಲಿ ನಾನು ಕಾಲ್ ರಿಜಿಸ್ಟರ್ ನ್ನು ಸದರಿ ಫೋನ್ ಗೆ ಸಂಬಂಧಪಟ್ಟಂತೆ ಪಡೆದುಕೊಂಡಿಲ್ಲ.

70. ಸದರಿ ತೇಟರ್ ನ ಕಾಂಪೌಂಡ್ ನ ಒಳಗೆ ಒಂದು ಅರಳಿಕಟ್ಟೆ ಇದೆ ಎಂದರೆ ಸರಿ. ಅಲ್ಲಿ ಒಂದು ಕ್ಯಾಂಟಿನ್ ಇದೆ ಎಂದರೆ ನೋಡಿಲ್ಲ. ಟ್ರ್ಯಾಪ್ ಮಹಜರ್ ಕಾಲಕ್ಕೆ ಕ್ಯಾಂಟಿನ್, ಟಾಕೀಸ್ ನಲ್ಲಿದ್ದ ಸಾರ್ವಜನಿಕರನ್ನು ಕರೆಸಿಯಿಸಿದ್ದೀರಾ ಎಂದರೆ ಇಲ್ಲ.

71. ಆರೋಪಿ ಮೋಹನ್ ನ ಗೆಳೆಯನ ಕಡೆಯಿಂದ ಬೇರೆ ಪ್ಯಾಂಟ್ ತರಿಸುವ ವ್ಯವಸ್ಥೆ ಮಾಡಿದೇನೆ. ಆತನ ಹೆಸರು ಗೊತ್ತಿಲ್ಲ. ಅವರು ಎಲ್ಲಿಂದ ಪ್ಯಾಂಟ್ ತಂದರು ಎಂದು ಗೊತ್ತಿಲ್ಲ.

72. ಸದರಿ ಪ್ಯಾಂಟ್ನ ವೇಸ್ಟ್ ಅಳತೆ ಎಷ್ಟು ಇತ್ತು ಎಂದು ಅಳತೆ ಮಾಡಿಲ್ಲ. 1ನೇ ಆರೋಪಿ 2ನೇ ಆರೋಪಿಗೆ ಫೋನ್ ಮಾಡಿ ದುಡ್ಡು ತೆಗೆದುಕೋ ಎಂದು ಹೇಳಿದ ಬಗ್ಗೆ ಸಿಡಿಯನ್ನು ಪಡೆದುಕೊಂಡಿದೀರಾ ಎಂದರೆ ಇಲ್ಲ.

73. ಟ್ರ್ಯಾಪ್ ಪಂಚನಾಮೆಯನ್ನು ಮಾಡಿದ ಸಂದರ್ಭದಲ್ಲಿ ಬೇರೆ ಸ್ವತಂತ್ರ ಸಾಕ್ಷಿಗಳ ಸಹಿ ಪಡೆದುಕೊಂಡಿದೀರಾ ಎಂದರೆ ಇಲ್ಲ. ಅಂಕಿಅಂಶಕೋಸ್ಕರ ಕೇಸ್ ಮಾಡಲು ಪಿರ್ಯಾದುದಾರನನ್ನು ಉಪಯೋಗಿಸಿಕೊಂಡು ಸುಳ್ಳು ಸಾಕ್ಷಿ ಸೃಷ್ಟಿ ಮಾಡಿ, ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

74. ಸದರಿ ವೇಳೆಯಲ್ಲಿ 1ನೇಆರೋಪಿ ಹರ್ಷ ಬಿಡದಿ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದ ಮತ್ತು ಆರೋಪಿ ಮೋಹನ ಕುಮಾರ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಹಾಗಾಗಿ ಅವರ ಹತ್ತಿರ ಪಿರ್ಯಾದಿಯ ಕೆಲಸ ಯಾವುದೇ ಕೆಲಸ ಬಾಕಿ ಇರಲಿಲ್ಲ ಮತ್ತು ಆರೋಪಿಗಳಿಗೂ ಪಿರ್ಯಾದಿಯ ಕೆಲಸಕ್ಕೂ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ

75. ಆರೋಪಿ 1 ಮತ್ತು 2 ಇವರು ಈ ಕೇಸಿಗೆ ಸಂಬಂಧಪಟ್ಟ ಸರ್ವೆ ನಂ. 17 ಕ್ಕೆ ಸಂಬಂಧಪಟ್ಟಂತೆ ತಹಸೀಲ್ದಾರ್ ರವರನ್ನು ಭೇಟಿ ಮಾಡಿದೀರಾ ಎಂಬ ಬಗ್ಗೆ ತನಿಖೆ ಮಾಡಿದ್ದೀರಾ ಎಂದರೆ ಇಲ್ಲ.

76. ದಿಃ03.08.2010 ರಂದು ಪಿರ್ಯಾದಿ ಒದಗಿಸಿದ ಟೇಪ್ ರೆಕಾರ್ಡ್ ನಲ್ಲಿ ಸಂಭಾಷಣೆ ಅಸ್ಪಷ್ಟವಾಗಿದೆ ಎಂದು ಸುಳ್ಳು ಷರಾ ಬರೆದಿದೇನೆ ಎಂದರೆ ಸರಿಯಲ್ಲ. ಪ್ರಿ ಟ್ಯಾಪ್ ಮಹಜರ್ ಆದ ಮೇಲೆ ಟ್ರ್ಯಾಪ್‌ಗೆ ಹೋಗುವ ಕಾಲಕ್ಕೆ ಪಿರ್ಯಾದಿಗೆ ಒಂದು ಟೇಪ್ ರೆಕಾರ್ಡ್ ಕೊಟ್ಟಿ ಕಳುಹಿಸಿದೆ ಎಂದರೆ ಸರಿ. ಅದರಲ್ಲಿ ಯಾವುದೇ ಸಂಭಾಷಣೆಯನ್ನು ಪಿರ್ಯಾದಿ ರೆಕಾರ್ಡ್ ಮಾಡಿಕೊಂಡಿರಲಿಲ್ಲ.

77. ಆರೋಪಿ ಯಾವುದೇ ಹಣವನ್ನು ಕೇಳಿಲ್ಲ ಮತ್ತು ಪಡೆದಿಲ್ಲ ಹಾಗಾಗಿ ಅಲ್ಲಿ ಯಾವುದೇ ಸಂಭಾಷಣೆ ರೆಕಾರ್ಡ್ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

78. ನಂತರ ನಾನು ದೂರುದಾರನಿಗೆ ಆರೋಪಿ ಮೋಹನ್ ಕುಮಾರ ನಿಂತಲ್ಲಿ ಹಣ ಬಿಸಾಕು ಆಮೇಲೆ ನಾನು ಬರುತ್ತೇನೆ ಎಂದು ಹೇಳಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಪ್ರಕಾರ ಪಿರ್ಯಾದಿ ಮೋಹನ್ ಕುಮಾರ ನಿಂತಿದ್ದ ತೇಟರ್ ಕಾಂಪೌಂಡ್ ಒಳಗಡೆ ಹಣ ಬಿಸಾಕಿ ನಮಗೆ ಸೂಚನೆ ಕೊಟ್ಟ ನಾವು ಅಲ್ಲಿ ಹೋಗಿ ಬಲವಂತದಿಂದ ಆರೋಪಿಯನ್ನು ಹಣ ಎತ್ತಿಕೊಳ್ಳುವಂತೆ ಮಾಡಿದೇವೆ ಎಂದರೆ ಸರಿಯಲ್ಲ.

79. ಆಗ ಆರೋಪಿ ಹಣ ಎತ್ತಿ ನಮ್ಮ ಕೈಯಲ್ಲಿ ಕೊಟ್ಟ ಆಗ ನಾವು ನಿಮ್ಮ ಪ್ಯಾಂಟಿನ ಜೇಬಿನಲ್ಲಿ ಇನ್ನೂ ದುಡ್ಡು ಇದೆ ಹೇಳಿದಾಗ ಅವನು ಪ್ಯಾಂಟಿನ ಜೇಬಿಗೆ ಕೈ ಹಾಕಿದ ಎಂದರೆ ಸರಿಯಲ್ಲ. ಆಗ ತೇಟರ್ ನಲ್ಲಿದ್ದ ತೇಟರ್ ಮಾಲೀಕ, ಕ್ಯಾಂಟಿನ್ ಮಾಲೀಕ ಅಥವಾ ಇತರೇ ಸಾರ್ವಜನಿಕರನ್ನು ಕರೆಯಿಸಿದರೆ ಅವರು ನಮ್ಮ ವಿರುದ್ಧ ಹೇಳುತ್ತಾರೆ ಎಂಬ ಕಾರಣಕ್ಕೆ ಅವರ ಸಾಕ್ಷಿಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

80. ಪಂಚ 1 ಮತ್ತು 2 ಇವರನ್ನು ಸಾಮೀಲು ಮಾಡಿಕೊಂಡು ನಮ್ಮ ಪ್ರಕರಣಕ್ಕೆ ಪೂರಕವಾಗಿ ಅವರ ಹೇಳಿಕೆಗಳನ್ನು ಪಡೆದುಕೊಂಡಿದೇನೆ ಎಂದರೆ ಸರಿಯಲ್ಲ. ನಂತರ ಆರೋಪಿ ಮೋಹನ್ ಕುಮಾರ ನನ್ನು ನಮ್ಮ ಕಚೇರಿಗೆ

ಕರೆದುಕೊಂಡು ನಾನು ಹೇಳಿದಂತೆ ಬರೆಯಬೇಕು ಎಂದು ಬಲವಂತ ಮಾಡಿ ನಿಪಿ *28* ರಂತೆ ಸಮಜಾಯಿಷಿ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲಲ್ಲ.

*81.* ಸಂಬಂಧಪಟ್ಟ ನಾನು ಗ್ರಾಮಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರ ಹೇಳಿಕೆಗಳನ್ನು ಪಡೆದುಕೊಂಡಿದೀರಾ ಎಂದರೆ ಇಲ್ಲ. ಆರೋಪಿ *1, 2* ನೇ ಆರೋಪಿಗೆ ದುಡ್ಡು ತೆಗೆದುಕೋ ಎಂದು ಹೇಳಿಲ್ಲ, *1* ನೇ ಆರೋಪಿ ಯಾವುದೇ ಹಣಕ್ಕಾಗಿ ಬೇಡಿಕೆ ಇಟ್ಟಿಲ್ಲ ಎಂಬುದು ಗೊತ್ತಿದ್ದರೂ ಕೂಡ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿಕೊಂಡಿದೇನೆ ಎಂರದೆ ಸರಿಯಲ್ಲ.

*82.* ಆರೋಪಿ *1* ಮತ್ತು *2* ಯಾವತ್ತು ಪಿರ್ಯಾದಿಯನ್ನು ಭೇಟಿ ಆಗಿ ನಿಮ್ಮ ಕೆಲಸ ಮಾಡಿಸುತ್ತೇನೆ ಎಂದು ಹಣಕ್ಕಾಗಿ ಬೇಡಿಕೆ ಇಟ್ಟಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ :**